CC  38/2025
PW-1

ಸಾಕ್ಷಿಗೆ ಪ್ರಮಾಣ ವಚನ ಭೋದಿಸಲಾಯಿತು.  ದಿನಾಂಕಃ 04.04.2026.

**<u>ಮಧ್ಯಂತರ ಅರ್ಜಿಯ ಆದೇಶದ ಮೇರೆಗೆ ಸಾಕ್ಷಿಯ  ಪಾಟೀ ಸವಾಲುಃ ಆರೋಪಿ ಪರ ಶ್ರೀ ಎಂ ಎಚ್ ಕೆ ವಕೀಲರಿಂದಃ</u>**

ಆರೋಪಿ ಮತ್ತು ನನ್ನ ನಡುವೆ ಜನವರಿ-2024 ರಿಂದ ಗೆಳೆತನದ ಸಂಬಂಧ ಇರುತ್ತದೆ.  ನಾನು ಮತ್ತು ಆರೋಪಿ ಹಾಗೆಯೇ ಸುಮ್ಮನೇ ಮಾತನಾಡುತ್ತಿದ್ದೆವು ನಂತರ ಅದು ಗೆಳೆತನ ಆಗಿರುತ್ತದೆ.  ನನ್ನ ಮತ್ತು ಆರೋಪಿಯ ನಡುವಿನ ಗೆಳೆತನದ ಸಂಬಂದ ವ್ಯವಹಾರವಾಗಿ ಜನವರಿ-2024ರಲ್ಲಿಯೇ ಆಗಿರುತ್ತದೆ. ಆರೋಪಿ ಮತುತ ನನ್ನ ನಡುವೆ ಪೀಠೋಪಕರಣದ ವ್ಯವಹಾರ ಆಗಿರುತ್ತದೆ.  ನಾನು ಮರಗೆಲಸ(ಸಾಮಿಲ್) ಮಾಡುತ್ತೇನೆ.  ನಾನು ಸಾಮಿಲ್ ನಡೆಸಲು ಪರವಾನಗಿ ಪಡೆದಿರುತ್ತೇನೆ.  ಅದೇ ರೀತಿ ಜಿ ಎಸ್ ಟಿ ಯನ್ನು ಸಹ ಪಡೆದಿರುತ್ತೇನೆ.  ನ್ಯಾಯಾಲಯಕ್ಕೆ ಜಿ ಎಸ್ ಟಿ ದಾಖಲೆ ಮತ್ತು ಪರವಾನಗಿಯನ್ನು ಹಾಜರುಪಡಿಸಲು ನನಗೆ ತೊಂದರೆ ಇಲ್ಲ.  ಆರೋಪಿ ಮತ್ತು ನನ್ನ ನಡುವೆ ಗೆಳೆತನವಾಗಿ ಒಂದು ವಾರಕ್ಕೆ ನನ್ನ ಬಳಿ ಬಂದು ಫರ್ನಿಚರ್ ಕೊಡುವಂತೆ ಕೇಳಿದ್ದ ನಾನು ಅವರಿಗೆ ಫರ್ನಿಚರ್ ಕೊಟ್ಟಿರುತ್ತೇನೆ.  ಆರೋಪಿಗೆ ಜನವರಿ -2024 ರಲ್ಲಿಯೇ ರೂ. 12,33,000/- ಮೊತ್ತದ ಫರ್ನಿಚರ್ ಕೊಟ್ಟಿದ್ದೆ.  ಆರೋಪಿಗೆ ಸೋಪಾಸೆಟ್, ಡೈನಿಂಗ್ ಸೆಟ್, ಕಾಟ್, ಡ್ರೆಸ್ಸಿಂಗ್ ಟೇಬಲ್, ದಿವಾನ್ ಕಾಟ್, ರ್ಯಾಕಿಂಗ್ ಚೇರ್ ಗಳನ್ನು ಕೊಟ್ಟಿದ್ದೆ.  ನಾನು ಆರೋಪಿಗೆ ಸಾಲದ ರೀತಿಯಲ್ಲಿ ಫರ್ನಿಚರ್ ಕೊಟ್ಟಿರುವ ಕಾರಣ ಅದಕ್ಕೆ ಬಿಲ್ ಕೊಟ್ಟಿಲ್ಲ.  ಸದರಿ ಫರ್ನಿಚರ್ಗಳನ್ನು ಟೀಕ್ ವುಡ್ ಮತ್ತು ರೋಸ್ ವುಡ್ ನಲ್ಲಿ ತಯಾರಿಸಿದ್ದೆ.  ಸದರಿ ಫರ್ನಿಚರ್ ಗಳನ್ನು ನಮ್ಮ ಸಾಮಿಲ್ ನಲ್ಲಿಯೇ ತಯಾರಿಸಿಕೊಟ್ಟಿದ್ದೆ.  ನಮ್ಮ ಸಾಮಿಲ್ ನಲ್ಲಿ 12 ಜನ ಕೆಲಸಗಾರರು ಇರುತ್ತಾರೆ.  ಆ 12 ಜನ ಕೆಲಸಗಾರರು ಖಾಯಂ ಕೆಲಸಗಾರರು ಅಲ್ಲ.  ನಾನು ಟೀಕ್ ವುಡ್ ನ್ನು ಮಂಗಳೂರಿನಿಂದ ತರಿಸಿದ್ದೆ.  ರೋಸ್ ವುಡ್ ನ್ನು ಮಡಿಕೇರಿ ಮತ್ತು ಮೈಸೂರಿನಿಂದ ತರಿಸಿದ್ದೆ.  2022-23 ರಲ್ಲಿ ಸದರಿ ವುಡ್ಗಳನ್ನು ತರಿಸಿದ್ದೆ.  ನಾನು ಸದರಿ ವುಡ್ ಗಳನ್ನು ತರಿಸಿದ ಬಗ್ಗೆ ನನ್ನ ಬಳಿ ಬಿಲ್ ಗಳು ಇರುತ್ತವೆ.  ಆ ಬಿಲ್ಲುಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಲು ನನಗೆ ತೊಂದರೆ ಇಲ್ಲ.  ಆರೋಪಿಗೆ ಸಾಲದ ರೂಪದಲ್ಲಿ ಫರ್ನಿಚರ್ ಗಳನ್ನು ಕೊಟ್ಟ  ಬಗ್ಗೆ ನಾನು ಯಾವುದೇ ಪುಸ್ತಕದಲ್ಲಿ ಬರೆದು ಇಟ್ಟಿಲ್ಲ.  ನಾನು ಆರೋಪಿಗೆ ಕೊಟ್ಟಿರುವಂತೆ ಬೇರೆ ಜನರಿಗೂ ಸಹ ಬಿಲ್ ಇಲ್ಲದೇ ಫರ್ನಿಚರ್ ಗಳನ್ನು ಕೊಡುತ್ತೇನೆ ಎಂದರೆ ಸರಿ.  ನಾನು ಆದಾಯ ತೆರಿಗೆ ಪಾವತಿಸುತ್ತೇನೆ ಎಂದರೆ ಸರಿ.  2022 ರಿಂದ 2025 ರವರೆಗಿನ ತೆರಿಗೆ ಪಾವತಿ ದಾಖಲೆಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಲು ನನಗೆ ತೊಂದರೆ ಇಲ್ಲ ಎಂದರೆ ಸರಿ.  ನಮ್ಮ ಸಾಮಿಲ್ ನಲ್ಲಿ ಕಳೆದ ವರ್ಷ ಸಿಸಿ ಕ್ಯಾಮರಾ ಹಾಕಿಸಿರುತ್ತೇನೆ.  ಸಿಸಿ ಕ್ಯಾಮರಾ ಬಿಲ್ ಹಾಜರುಪಡಿಸಲು ಆಗುವುದಿಲ್ಲ.  ನಾನು ಆರೋಪಿಗೆ ಫರ್ನಿಚರ್ ಗಳನ್ನು ಕೊಡುವಾಗ ಸಿಸಿ ಕ್ಯಾಮರಾವನ್ನು ಹಾಕಿಸಿರಲಿಲ್ಲ.  ಫರ್ನಿಚರ್ ಗಳನ್ನು ಒಯ್ಯಲು ಆರೋಪಿ ಒಬ್ಬರೇ ಬಂದಿದ್ದರು.  ಆರೋಪಿಯು ಫರ್ನಿಚರ್ ಗಳನ್ನು ಅವರ ವಾಹನದಲ್ಲಿ ತೆಗೆದುಕೊಂಡು ಹೋಗಿರುತ್ತಾರೆ.  ಅದು ಯಾರ ವಾಹನ ಎಂದು ನನಗೆ ಗೊತ್ತಿಲ್ಲ.  ಆರೋಪಿ ಮತ್ತು ಅವರ ಕುಟುಂಬಸ್ಥರು ಬಂದು ಫರ್ನಿಚರ್ ಗಳನ್ನು ತೆಗೆದುಕೊಂಡು ಹೋಗಿರುತ್ತಾರೆ.  ಫರ್ನಿಚರ್ ಗಳನ್ನು ತಯಾರಿಸಿದ ನಂತರ ಕೆಲವು ಗ್ರಾಹಕರು ಅವರೇ

ಫರ್ನಿಚರ್ ಗಳನ್ನು ಲೋಡ್ ಮಾಡಿಕೊಂಡು ಹೋಗುತ್ತಾರೆ. ಕೆಲವೊಮ್ಮೆ ನಾವೇ ಲೋಡ್ ಮಾಡಿಕೊಡುತ್ತೇವೆ. ನಮ್ಮ ಸಾಮಿಲ್ ಕೆಟಲಾಗ್ ಇತ್ತು ಈಗ ಅದು ಇಲ್ಲ. ಫರ್ನಿಚರ್ ಗಳನ್ನು ಗ್ರಾಹಕರಿಗೆ ಕೊಟ್ಟಾಗ ಅವುಗಳ ಭಾವಚಿತ್ರಗಳನ್ನು ನಾವು ತೆಗೆದುಕೊಳ್ಳುತ್ತೇವೆ ಎಂದರೆ ಸರಿ. ಆ ಭಾವಚಿತ್ರಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಲು ನನಗೆ ತೊಂದರೆ ಇಲ್ಲ ಎಂದರೆ ಸರಿ. ಆರೋಪಿಯೇ ಫರ್ನಿಚರ್ ಗಳನ್ನು ಅವರ ಮನೆಗೆ ತೆಗೆದುಕೊಂಡು ಹೋಗಿರುತ್ತಾರೆ. ಆರೋಪಿಯು 6 ತಿಂಗಳು ಬಿಟ್ಟು ಹಣ ಕೊಡುವುದಾಗಿ ಹೇಳಿದ್ದರು. ದಿನಾಂಕ 28.01.2025 ರಲ್ಲಿ ಆರೋಪಿಯು ಚೆಕ್ಕನ್ನು ತೆಗೆದುಕೊಂಡು ಬಂದು ಕೊಟ್ಟಿರುತ್ತಾರೆ. ಆರೋಪಿಯು ಚೆಕ್ಕನ್ನು ಭರ್ತಿ ಮಾಡಿಕೊಂಡು ಬಂದು ಸಹಿ ಮಾಡದೇ ಕೊಡಲು ಬಂದಿದ್ದರು ನಾನು ಸಹಿ ಮಾಡಿಕೊಡುವಂತೆ ಹೇಳಿದೆ ಆಗ ಅವರು ನನ್ನ ಸಮಕ್ಷಮ ಸಹಿ ಮಾಡಿಕೊಟ್ಟಿರುತ್ತಾರೆ. ಆರೋಪಿಯು ಚೆಕ್ಕನ್ನು ಕೊಡುವಾಗ ಯಾವುದೇ ಸಾಕ್ಷಿದಾರರು ಹಾಜರು ಇರಲಿಲ್ಲ. ಆಗ ನಮ್ಮ ಸಾಮಿಲ್ ನಲ್ಲಿ ಸಿಸಿ ಕ್ಯಾಮರಾ ಹಾಕಿಸಿದ್ದೆವು ಎಂದರೆ ಸಾಕ್ಷಿಯು ಹಾಕಿಸಿದ್ದೆವು ಆದರೆ ಆರೋಪಿಯು ಚೆಕ್ಕನ್ನು ಬಸ್ ಸ್ಟಾಂಡ್ ಹತ್ತಿರ ಇರುವ ಅಂಗಡಿ ಹತ್ತಿರ ಕೊಟ್ಟಿರುತ್ತಾರೆ. ಆರೋಪಿಯೇ ಚೆಕ್ ನಲ್ಲಿ ರೂ.12,33,000/- ಎಂದು ಹಣ ನಮೂದಿಸಿ ಕೊಟ್ಟಿದ್ದರು. ಆರೋಪಿಗೆ ನಾನು ಲೆಕ್ಕ ಮಾಡಿ ಹಣ ಹೇಳಿದ್ದೆ ಹಾಗಾಗಿ ಅಷ್ಟಕ್ಕೆ ಚೆಕ್ಕನ್ನು ಕೊಟ್ಟಿರುತ್ತಾರೆ. ರೂ. 12,33,000/- ಆಗಿರುತ್ತದೆ ಎನ್ನುವುದಕ್ಕೆ ನನ್ನ ಬಳಿ ಬಾಯಿ ಮಾತಿನ ಲೆಕ್ಕ ಇರುತ್ತದೆ. ಆರೋಪಿಯು ಕೊಟ್ಟ ಚೆಕ್ ಐಡಿಎಫ್ ಸಿ ಬ್ಯಾಂಕಿನ ಚೆಕ್ ಇರುತ್ತದೆ. ನಾನು ಸದರಿ ಚೆಕ್ಕನ್ನು ಕರ್ನಾಟಕ ಗ್ರಾಮೀಣ ಬ್ಯಾಂಕಿಗೆ ಹಾಜರುಪಡಿಸಿದ್ದೆ. ದಿನಾಂಕ 28.03.2025 ರಂದು ಚೆಕ್ ದಿನಾಂಕ ಇದ್ದು ಅದನ್ನು ದಿನಾಂಕ 03.04.2025 ರಂದು ಬ್ಯಾಂಕಿಗೆ ಹಾಜರುಪಡಿಸಿದ್ದೆ. ಸದರಿ ಚೆಕ್ ಸಹಿ ಹೊಂದಾಣಿಕೆಯಾಗುತ್ತಿಲ್ಲ ಎಂದು ವಾಪಸ್ಸು ಬಂದಿರುತ್ತದೆ. ಆರೋಪಿಗೆ ಸದರಿ ವಿಷಯವನ್ನು ತಿಳಿಸಿದೆ ಆಗ ಅವರು ಒಂದು ವಾರ ಬಿಟ್ಟು ಬರುತ್ತೇನೆ ಎಂದು ಹೇಳಿದವರು ಒಂದು ತಿಂಗಳಾದರೂ ಸಹ ಬರಲಿಲ್ಲ. ನನ್ನ ಮತ್ತು ಆರೋಪಿಯ ಊರು ಚನ್ನಗಿರಿ ಎಂದರೆ ಸರಿ. ನಮ್ಮ ಮನೆಯಿಂದ ಆರೋಪಿಯ ಮನೆಗೆ 200 ಮೀಟರ್ ದೂರ ಇರಬಹುದು. ಹಣ ಕೇಳಲು ನಾನು ಆರೋಪಿಯ ಮನೆಗೆ ಹೋಗಿದ್ದೆ ಅವರ ಮನೆ ಬೀಗ ಹಾಕಿತ್ತು. ದಿನಾಂಕ 15.04.2025 ರಂದು ಆರೋಪಿಗೆ ನಮ್ಮ ವಕೀಲರ ಕಡೆಯಿಂದ ನೋಟೀಸ್ ಕಳುಹಿಸಿದ್ದೆ. ಆ ನಂತರ ನನ್ನ ಮತ್ತು ಆರೋಪಿಯ ನಡುವೆ ಯಾವುದೇ ವ್ಯವಹಾರ ನಡೆದಿಲ್ಲ ಕೇವಲ ಫೋನ್ ಮೂಲಕ ಮಾತನಾಡಿರುತ್ತೇನೆ. ಅಲ್ಲಿಂದ ಇಲ್ಲಿಯವರೆಗೆ ಆರೋಪಿ ಮತ್ತು ನಾನು ಸೇರಿಲ್ಲ ಎಂದರೆ ಸರಿ. ಅದೇ ರೀತಿ ನಾವಿಬ್ಬರು ಶುಭ ಸಮಾರಂಭಗಳಿಗೆ ಜೊತೆಯಾಗಿ ಹೋಗಿಲ್ಲ ಎಂದರೆ ಸರಿ. ಅದೇ ರೀತಿ ನಮ್ಮ ಸಮುದಾಯದಲ್ಲಿ ಮರಣ ಹೊಂದಿದಾಗ ನಾವಿಬ್ಬರು ಜೊತೆಗೆ ಶವ ಸಂಸ್ಕಾರಕ್ಕೆ ಹೋಗಿಲ್ಲ ಎಂದರೆ ಸರಿ. ಅದೇ ರೀತಿ ನಮ್ಮಿಬ್ಬರ ನಡುವೆ ವ್ಯವಹಾರ ನಡೆದಾಗಿನಿಂದ ಇಲ್ಲಿಯವರೆಗೂ ಯಾವುದೇ ಗಲಾಟೆ ಆಗಿಲ್ಲ ಎಂದರೆ ಸರಿ. ಆರೋಪಿಯು ನನಗೆ ಚೆಕ್ಕನ್ನು ಕೊಟ್ಟಿಲ್ಲ ಎಂದರೆ ಸರಿಯಲ್ಲ.

(ಈ ಹಂತದಲ್ಲಿ ಆರೋಪಿ ಪರ ವಕೀಲರು ಮುಂದುವರಿದ ಪಾಟೀ ಸವಾಲಿಗೆ ಸಮಯಾವಕಾಶ ಕೋರಿದ್ದು ಸಮಯಾವಕಾಶ ನೀಡಲಾಯಿತು )

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು)**

**ಓ ಹೇ ಕೇ ಸ ಇ ಒ**

**ಹಿರಿಯ ಸಿವಿಲ್ ನ್ಯಾಯಾಧೀಶರು**
**ಮತ್ತು ಜೆಎಂಎಫ್‌ಸಿ.ಚನ್ನಗಿರಿ.**